# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರು (ಓ.ಎಫ್.ಸಿ) ಕಛೇರಿ, ಎನ್.ಆರ್.ಚೌಕ, ಬೆಂಗಳೂರು

ಸಂಖ್ಯೆ:ಮು.ಅ.(ಓ.ಎಫ್.ಸಿ.)/ಪಿ.ಆರ್./ 09 /2019-20 ದಿನಾಂಕ: 08/08/2019

## ಕಛೇರಿ ಆದೇಶ

**ವಿಷಯ:** ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಮಾಹಿತಿ ನೀಡುವ ಕುರಿತು ಹೆಚ್ಚುವರಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ನೇಮಿಸುವ ಬಗ್ಗೆ

### ಪ್ರಸ್ತಾವನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಓ.ಎಫ್.ಸಿ. ವಿಭಾಗವು ಕಾರ್ಯನಿರ್ವಹಿಸುತ್ತಿದ್ದು ಸದರಿ ವಿಭಾಗದಲ್ಲಿ ಮುಖ್ಯ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾರ್ಯನಿರ್ವಹಿಸುತ್ತಿದ್ದಾರೆ. ಓ.ಎಫ್.ಸಿ ಕೋಶದಲ್ಲಿ ಸ್ವೀಕೃತವಾಗುವ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿನ ಅರ್ಜಿಗಳನ್ನು ನಿರ್ವಹಿಸಲು ಪ್ರಸ್ತುತ ಕಾರ್ಯಪಾಲಕ ಅಭಿಯಂತರರು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ ಮತ್ತು ಮುಖ್ಯ ಅಭಿಯಂತರರು ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ. ಪ್ರಸ್ತುತ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಅರ್ಜಿಗಳು ಅಧಿಕ ಸಂಖ್ಯೆಯಲ್ಲಿ ಸ್ವೀಕೃತವಾಗುತ್ತಿರುವ ಹಿನ್ನೆಲೆಯಲ್ಲಿ ಸಕಾಲದಲ್ಲಿ ಸದರಿ ಅರ್ಜಿಗಳ ವಿಲೇವಾರಿಗಾಗಿ ಈ ಕೆಳಗಿನಂತೆ ಆದೇಶಿಸಿದೆ.

### ಆದೇಶ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಓ.ಎಫ್.ಸಿ. ವಿಭಾಗದಲ್ಲಿ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಸ್ವೀಕೃತವಾಗುತ್ತಿರುವ ಅರ್ಜಿಗಳ ಸಕಾಲದ ವಿಲೇವಾರಿಗಾಗಿ ಸದರಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ಮಾಹಿತಿ ಹಕ್ಕು ಕಾಯ್ದೆಯ ಪರಿಚ್ಛೇದ 5(1)ರಂತೆ ನೇಮಿಸಲಾಗಿದೆ ಮತ್ತು ಸದರಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮಾಹಿತಿ ಹಕ್ಕು ಕಾಯ್ದೆಯ ಪರಿಚ್ಛೇದ 6(1)ರಂತೆ ಕಾರ್ಯನಿರ್ವಹಿಸುವುದು.

ಮುಖ್ಯ ಅಭಿಯಂತರರು
(ಓ.ಎಫ್.ಸಿ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ಪ್ರತಿ:***

1. ಮಾನ್ಯ ಆಯುಕ್ತರು
2. ವಿಶೇಷ ಆಯುಕ್ತರು(ಯೋಜನೆ)
3. ಕಾರ್ಯಪಾಲಕ ಅಭಿಯಂತರರು (ಓ.ಎಫ್.ಸಿ.)
4. ಎಲ್ಲ ಸಹಾಯಕ ಕಾರ್ಯಪಾಲಕ ಅಭಿಯಂತರರು (ಓ.ಎಫ್.ಸಿ.)ಗಳಿಗೆ ಮುಂದಿನ ಕ್ರಮಕ್ಕಾಗಿ
5. ಪಾಲಿಕೆಯ ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ – ಪಾಲಿಕೆಯ ಜಾಲತಾಣದಲ್ಲಿ ಆರ್.ಟಿ.ಐ ವಿಭಾಗದಲ್ಲಿ ಕಛೇರಿ ಆದೇಶವನ್ನು ಪ್ರಚುರಪಡಿಸುವುದಕ್ಕಾಗಿ.
6. ಕಛೇರಿ ಕಡತಕ್ಕೆ.

Office of IT Advisor No. 313 Date 16-8-19



IT Advisor
BBMP., Bangalore
16/08/2019